**ದಿನಾಂಕ: 29-05-2019 ರಂದು ಕುಕ್ಕವಾಡ ಗ್ರಾಮದ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್‌ನ ಆವರಣದಲ್ಲಿ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಇವರು ಹಾಲಿ ಇರುವ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಹೊಸ ಕಬ್ಬಿನ ರಸ/ಮೊಲಾಸೆಸ್ ಆಧಾರಿತ 65 ಕೆವಿಎಲ್‌ಪಿಡಿ ಸಾಮರ್ಥ್ಯಧ ಡಿಸ್ಟಿಲರಿ/ಎಥನಾಲ್ ಉತ್ಪಾದನಾ ಘಟಕ ಸ್ಥಾಪಿಸಲು ಉದ್ದೇಶಿಸಿರುವ ಬಗ್ಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡಾವಳಿಗಳು.**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : ಮೆ॥ ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್‌ನ ಆವರಣ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. |
| ದಿನಾಂಕ | : 29-05-2019. |
| ಅಧ್ಯಕ್ಷತೆ | : ಶ್ರೀ ಜಿ.ಎನ್. ಶಿವಮೂರ್ತಿ, ಭಾ.ಆ.ಸೇ.<br>ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,<br>ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿ, ದಾವಣಗೆರೆ. |
| ಹಾಜರಿದ್ದ ಅಧಿಕಾರಿಗಳ ವಿವರ | : **ಅನುಬಂಧ-1** |
| ಯೋಜನಾದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | : **ಅನುಬಂಧ-2** |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : **ಅನುಬಂಧ-3** |
| ಸಾರ್ವಜನಿಕರಿಂದ ಸ್ವೀಕೃತವಾದ ಅಹವಾಲುಗಳು | : **ಅನುಬಂಧ-4** |

**ಪೀಠಿಕೆ:-**

ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಇವರು ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಕುಕ್ಕವಾಡ ಗ್ರಾಮದ ಸರ್ವೆ ನಂ.51/4 ಮತ್ತು 51/5, ಕುಕ್ಕುವಾಡಾ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಹಾಲಿ ಇರುವ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಹೊಸ ಕಬ್ಬಿನ ರಸ/ಮೊಲಾಸೆಸ್ ಆಧಾರಿತ 65 ಕೆವಿಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ/ಎಥನಾಲ್ ಉತ್ಪಾದನಾ ಘಟಕ ಸ್ಥಾಪಿಸಲು ಪ್ರಸ್ತಾಪಿಸಿರುತ್ತಾರೆ.

ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ದಿನಾಂಕ: 14.09.2006 ರಂದು ಹೊರಡಿಸಿರುವ ಪರಿಸರ ಅಘಾತ ಅಂದಾಜೀಕರಣ ಅಧಿಸೂಚನೆ ಪ್ರಕಾರ ಸದರಿ ಯೋಜನೆಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ನಿರ್ದೇಶಕರು ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ಸದರಿ ಯೋಜನೆಗೆ Terms of References (ಟಿ.ಓ.ಅರ್) ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆ ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ 'ಕರಡು ಪರಿಸರ' ಅಘಾತ ಅಂದಾಜೀಕರಣ ವರದಿಯನ್ನು ಮತ್ತು ಇದರ ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ ಕೇಂದ್ರ ಸರ್ಕಾರದ ಪರಿಸರ ಅಘಾತ ಅಧ್ಯಯನ ಅಧಿಸೂಚನೆ-2006ರ ಪ್ರಕಾರ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರು ಕೋರಿ ಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಸಂಬಂದಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು **ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯ, ಕುಕ್ಕವಾಡ ಗ್ರಾಮದ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಆವರಣದಲ್ಲಿ ದಿನಾಂಕ:29-05-2019 ರಂದು ಬೆಳಗ್ಗೆ 11:30 ಘಂಟೆಗೆ** ನಿಗದಿಪಡಿಸಲಾಗಿತ್ತು.

ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಇವರು ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಕುಕ್ಕವಾಡ ಗ್ರಾಮದ ಸರ್ವೆ ನಂ.51/4 ಮತ್ತು 51/5, ಕುಕ್ಕುವಾಡಾ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಹಾಲಿ ಇರುವ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಹೊಸ ಕಬ್ಬಿನ ರಸ/ಮೊಲಾಸೆಸ್ ಆಧಾರಿತ 65 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ/ಎಥನಾಲ್ ಉತ್ಪಾದನಾ ಘಟಕ ಸ್ಥಾಪಿಸಲು ಉದ್ದೇಶಿಸಿರುವ ಯೋಜನೆಗೆ ಕುರಿತಂತೆ **ದಿನಾಂಕ: 29-05-2019 ರಂದು** ಬೆಳಿಗ್ಗೆ 11:30 ಘಂಟೆಗೆ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಕುಕ್ಕವಾಡ ಗ್ರಾಮದ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಆವರಣದಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲು ಉದ್ದೇಶಿಸಲಾಯಿತು.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **"ಟೈಮ್ಸ್ ಆಫ್ ಇಂಡಿಯಾ"** ಮತ್ತು ಕನ್ನಡ ಪತ್ರಿಕೆಯಾದ **"ಪ್ರಜಾವಾಣಿ"** ದಿನ ಪತ್ರಿಕೆಗಳಲ್ಲಿ ದಿನಾಂಕ: 28-04-2019 ರಂದು ನೀಡಲಾಗಿರುತ್ತದೆ. ಅಲ್ಲದೇ ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆ ಯಾದ **"ಜನತಾವಾಣಿ"**ಯಲ್ಲೂ ಸಹ ದಿನಾಂಕ:28-04-2019 ರಂದು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ-ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಅಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ದಾವಣಗೆರೆ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ, ಗ್ರಾಮ ಪಂಚಾಯಿತಿ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ, ಕೇಂದ್ರ ಅರಣ್ಯ, ಪರಿಸರ ಮತ್ತು ಹವಮಾನ ಬದಲಾವಣೆ ಸಚಿವಾಲಯ, (ದಕ್ಷಿಣ ವಲಯ ಕಛೇರಿ), ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಕಛೇರಿ, ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

**ದಿನಾಂಕ:** 29-05-2019 **ರಂದು** ಬೆಳಿಗ್ಗೆ 11:30 ಘಂಟೆಗೆ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, ಕುಕ್ಕವಾಡ ಗ್ರಾಮದ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್ ಆವರಣದಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲಾಯಿತು. ಶ್ರೀ ಕೆ.ಬಿ. ಕೊಟ್ರೇಶ್, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ದಾವಣಗೆರೆ ಇವರು ಶ್ರೀ ಜಿ.ಎನ್. ಶಿವಮೂರ್ತಿ,ಭಾ.ಆ.ಸೇ., ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರನ್ನು ಸಭೆಗೆ ಸ್ವಾಗತಿಸುತ್ತಾ, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯರವರ ಪರಿಸರ ಅಘಾತ ಅಧಿಸೂಚನೆ 2006 ರನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮವನ್ನು ವಿವರಿಸಿದರು ಮತ್ತು ಉದ್ದೇಶಿತ ಪ್ರಸ್ತಾವನೆಯ ಪರಿಸರ ಅಘಾತ ಅಧಿಸೂಚನೆ 2006 ರ ವ್ಯಾಪ್ತಿಯಲ್ಲಿ ಸೇರಿರುವುದರಿಂದ ಪರಿಸರ ಸಾರ್ವಜನಿಕ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಸಭೆಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಸದರಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. ಅದರಂತೆ, **ಶ್ರೀ ಜಿ.ಎನ್. ಶಿವಮೂರ್ತಿ,** ಭಾ.ಆ.ಸೇ. **ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ** ಇವರು ಸಭೆಯ ಮಹತ್ವವನ್ನು ತಿಳಿಸಿ ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್‌ನ ಪ್ರತಿನಿಧಿಯವರಿಗೆ ಯೋಜನೆಯ ಬಗ್ಗೆ ಪ್ರಸ್ತಾವನೆ ಮಂಡಿಸಲು ನಿರ್ದೇಶಿಸಿದರು ಮತ್ತು ಯೋಜನೆಯ ಬಗ್ಗೆ ಅಭಿಪ್ರಾಯಗಳು, ಆಕ್ಷೇಪಗಳು ಇದ್ದಲ್ಲಿ ಪ್ರತಿಪಾದಕರು ಮಾಡಿದ ಪ್ರಸ್ತುತಿ ನಂತರ ತಿಳಿಸಲು ಸಾರ್ವಜನಿಕರಿಗೆ ಸೂಚಿಸಿದರು.

ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್‌ನ ಪರವಾಗಿ MITCON Consultancy & Engineering Services Ltd., Bangalore ರವರ ಪರಿಸರ ಸಲಹೆಗಾರರು ಉದ್ದೇಶಿತ ಯೋಜನೆಯ ತಾಂತ್ರಿಕ ವಿಷಯ ಕುರಿತು ಮಾತನಾಡುತ್ತಾ, ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆಯಿಂದ ಆಗಬಹುದಾದ ತೊಂದರೆ ಮತ್ತು ಅದಕ್ಕೆ ಪರಿಹಾರೋಪಾಯಗಳನ್ನು ಸಭೆಯಲ್ಲಿ ವಿವರಿಸಿದರು. ಸದರಿ ಕಂಪನಿಯವರು ಹಾಲಿ ಇರುವ ಸಕ್ಕರೆ ಕಾರ್ಖಾನೆಯ ಆವರಣದಲ್ಲೇ ಹೊಸ ಕಬ್ಬಿನ ರಸ/ಮೊಲಾಸೆಸ್ ಆಧಾರಿತ 65 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ/ಎಥನಾಲ್ ಉತ್ಪಾದನಾ ಘಟಕ ಸ್ಥಾಪಿಸಲು ಪ್ರಸ್ತಾಪಿಸಿರುತ್ತಾರೆ. ಸದರಿ ಕಂಪನಿಯ ಉದ್ದೇಶಿತ ಯೋಜನೆಗೆ ಹೆಚ್ಚುವರಿ ಜಾಗದ ಅವಶ್ಯಕತೆಯಿರುವುದಿಲ್ಲವೆಂದು ಸಭೆಯಲ್ಲಿ ವಿವರಿಸಿದರು.

**ಈ ಕೆಳಕಂಡಂತೆ ಸಾರ್ವಜನಿಕರು ತಮ್ಮ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.**

**1. ಶ್ರೀ ಕೆ.ಟಿ. ಹನುಮೇಗೌಡ, ಕಬ್ಬು ಬೆಳಗಾರರ ಸಂಘದ ಕಾರ್ಯದರ್ಶಿ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ:**

ಇವರು ಸಭೆಯಲ್ಲಿ ಮಾತನಾಡುತ್ತಾ, ಈ ಹಿಂದೆ ನಾವು ವಿದ್ಯುತ್ ಉತ್ಪಾದನಾ ಹೆಚ್ಚುವರಿಗೆ ಒಪ್ಪಿಗೆಯನ್ನು ನೀಡಿದ್ದೇವೆ, ಅದೇ ರೀತಿ ಈಗ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಿರುವ ಕಬ್ಬಿನ ರಸ/ಮೊಲಾಸೆಸ್ ಆಧಾರಿತ ಡಿಸ್ಟಿಲರಿ/ಎಥನಾಲ್ ಘಟಕವನ್ನು ಸಾರ್ವಜನಿಕರ ಆರೋಗ್ಯದ ಮೇಲೆ ತೊಂದರೆಯಾಗದಂತೆ ಸ್ಥಾಪಿಸಲು ಒಪ್ಪಿಗೆ ಇರುತ್ತದೆ. ಸದರಿ ಘಟಕದ ಸ್ಥಾಪನೆಯಿಂದ ಗ್ರಾಮದ ಗ್ರಾಮಸ್ಥರ ಆರೋಗ್ಯದ ಮೇಲೆ ಅನಾನುಕೂಲತೆಯಾಗಬಾರದು, ಕೋ–ಜೆನ್ ಉತ್ಪಾದನೆಯಿಂದ ಶಬ್ಧ ಬರುತ್ತಿರುತ್ತದೆ. ಅದನ್ನು ನಿಯಂತ್ರಿಸಬೇಕು. ಸದರಿ ಘಟಕದ ಸ್ಥಾಪನೆಯಿಂದ ವಾಸನೆ ಮತ್ತು ನೀರು ಹೊರಗೆ ಬಿಡದಂತೆ ಕ್ರಮಕೈಗೊಳ್ಳುವುದು, ಉದ್ದೇಶಿತ ಡಿಸ್ಟಲರಿ ಘಟಕದಲ್ಲಿ ಸ್ಥಳೀಯರಿಗೆ ಉದ್ಯೋಗ ಒದಗಿಸುವಂತೆ ಕೋರಿದರು.

**2. ಶ್ರೀ ಶಂಕರ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಸದರಿಯವರು ಸಭೆಯಲ್ಲಿ ಮಾತನಾಡುತ್ತಾ, ಸದರಿ ಜಮೀನುಗಳಲ್ಲಿ ಕಾರ್ಬನ್ ಇರುವುದಿಲ್ಲ. ಈ ಹಿಂದೆ ನಾವು ಕೋ–ಜೆನ್ ಹೆಚ್ಚುವರಿ ಉತ್ಪಾದನೆಗೆ ಅನುಮತಿ ನೀಡುವ ಸಮಯದಲ್ಲಿ ಕೆಲವು ಸಲಹೆಗಳನ್ನು ನೀಡಲಾಗಿರುತ್ತದೆ. ಸದರಿ ಕಂಪನಿಯವರು ಶ್ಯಾಗಲೆ ಹಳ್ಳದ ನೀರನ್ನು ಬಳಸುತ್ತಿರುತ್ತಾರೆ. ಅದ್ದರಿಂದ ಶ್ಯಾಗಲೆ ಹಳ್ಳ ಜೀವಂತವಾಗಿರಲು 3 ರಿಂದ 4 ಚೆಕ್ ಡ್ಯಾಂಗಳನ್ನು ನಿರ್ಮಿಸಬೇಕು. ಮಾದರಿ ಹಳ್ಳಗಳನ್ನು ನಿರ್ಮಿಸಬೇಕು, ಸದರಿ ಸಕ್ಕರೆ ಕಾರ್ಖಾನೆಯಿಂದ ಸುತ್ತಮುತ್ತ ಗ್ರಾಮಗಳಿಗೆ ಅನುಕೂಲ ಮತ್ತು ಆನಾನುಕೂಲವಾಗುತ್ತಿರುತ್ತದೆ. ಪರಿಸರ ರಕ್ಷಣೆ ಮಾಡಲು ಸಾಕಷ್ಟು ಗಿಡ ಮರಗಳನ್ನು ಬೆಳಸಬೇಕು. ಪರಿಸರ ಹಾಳಾಗದಂತೆ 4 ಲಕ್ಷ ಗಿಡಗಳನ್ನು ಸ್ಥಾಪಿಸಬೇಕು. ಸದರಿ ಕಾರ್ಖಾನೆಯವರು ಶ್ಯಾಗಲಿ ಹಳ್ಳದ ನೀರಿನ ಬಳಸಲು ಚೆಕ್ ಡ್ಯಾಂಗಳನ್ನು ನಿರ್ಮಿಸಬೇಕು, ಪರಿಸರ ಹಾಳಾಗದಂತೆ ಗಿಡಗಳನ್ನು ಬೆಳಸಬೇಕು, ಸದರಿ ಯೋಜನೆಯಿಂದ ಅನುಕೂಲ ಮತ್ತು ಅನಾನುಕೊಲತೆ ಇರುತ್ತದೆ. ಕಾರ್ಖಾನೆಯಿಂದ ಹೊರಬರುವ ನೀರಿನಲ್ಲಿ 100% Heavy Metals ಇರುತ್ತದೆ. ಆದ್ದರಿಂದ ಸುತ್ತಮುತ್ತಲಿನ ಜಮೀನುಗಳ ಮಣ್ಣು ಪರೀಕ್ಷೆ ಮಾಡಿಸಬೇಕು, ಪರಿಸರಕ್ಕೆ ಅನುಕೂಲವಾಗುವ ಬೇವು, ಹೊನ್ನೆ ಮರಗಳನ್ನು ಬೆಳಸಬೇಕು, ಸಾಧ್ಯವಾದಷ್ಟು ರೈತರುಗಳಿಗೆ ಬೇವು ಹೊಂಗೆ ಗಿಡಗಳನ್ನು ಬೆಳಸಲು ವಿತರಿಸಬೇಕಾಗಿ ಕೋರಿದರು. ಸೊಳ್ಳೆಗಳು ಹೆಚ್ಚಾಗಿರುತ್ತವೆ ಆದ್ದರಿಂದ ಮಹಾಘನಿ ಸಸಿಗಳನ್ನು ಬೆಳಸುವುದು, ಚೆಕ್ ಡ್ಯಾಂನ ಹೂಳನ್ನು ತೆಗೆಸುವುದು, ಇದರಿಂದ ಮೀನುಗಳನ್ನು ಸಾಕಬಹುದು, ಹಳ್ಳದ ಪಾತ್ರಗಳನ್ನು ಸರ್ವೆ ಮಾಡಿಸಿ ಪಕ್ಕದಲ್ಲಿ ಮಳೆ ತರಸುವ ಗಿಡಗಳನ್ನು ಬೆಳಸಬೇಕು. ಇದರಿಂದ ಹಳ್ಳಗಳು ಜೀವಂತವಾಗಿರುತ್ತವೆ. ಸದರಿ ಕಾರ್ಖಾನೆ ಮುಂಭಾಗದಲ್ಲಿ ಪಾರ್ಕ್ ನಿರ್ಮಾಣ ಮಾಡುವಂತೆ ಹಾಗೂ ಕುಕ್ಕುವಾಡ ಗ್ರಾಮವನ್ನು ದತ್ತು ತೆಗೆದುಕೊಳ್ಳುವಂತೆ ಕೋರಿದರು. ಉದ್ದೇಶಿತ ಡಿಸ್ಟಲರಿ/ಎಥನಾಲ್ ಘಟಕವನ್ನು ಸ್ಥಾಪಿಸಲು ಒಪ್ಪಿಗೆ ಇರುತ್ತದೆ ಎಂದು ತಿಳಿಸಿದರು.

**3. ಶ್ರೀ ಕೆ.ಬಸಪ್ಪ, ಹೊಳೇನಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಸದರಿ ಕಾರ್ಖಾನೆಯಿಂದ ಕೆಟ್ಟವಾಸನೆ ಬರುತ್ತಿರುತ್ತದೆ. ವಾಸನೆಯನ್ನು ನಿಯಂತ್ರಿಸಲು ಕ್ರಮಕೈಗೊಳ್ಳುವುದು, ಜನರಿಗೆ ಅನುಕೂಲ ಮಾಡಿಕೊಡಬೇಕು, ತ್ಯಾಜ್ಯ ನೀರು ಮತ್ತು ವಾಸನೆ ಬರುತ್ತಿರುತ್ತದೆ ಅದನ್ನು ನಿಯಂತ್ರಿಸಲು ಕ್ರಮಕೈಗೊಳ್ಳುವಂತೆ ಕೋರಿದರು. ಉದ್ದೇಶಿತ ಯೋಜನೆಯನ್ನು ಸ್ಥಾಪಿಸಲು ಅಭ್ಯಂತರವಿರುವುದಿಲ್ಲ.

**4. ಶ್ರೀ ಟಿ.ಗುರುದತ್ತ, ಕಾರಿಗನೂರು, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಸದರಿ ಕಾರ್ಖಾನೆಯವರು ಗಿಡಮರಗಳನ್ನು ನೆಡುವುದು, ವಾಸನೆಯನ್ನು ನಿಯಂತ್ರಿಸಿ ಉದ್ದೇಶಿತ ಯೋಜನೆಯನ್ನು ಸ್ಥಾಪಿಸಲು ಅಭ್ಯಂತರವಿರುವುದಿಲ್ಲ.

**5. ಶ್ರೀ ಸಿದ್ದಯ್ಯ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಸದರಿ ಕಾರ್ಖಾನೆ ಪ್ರಾರಂಭದಿಂದ ದಿನಾಲು ಬೂದಿ ಬರುತ್ತಿರುತ್ತದೆ. ರಸ್ತೆಯಲ್ಲಿ ಸಂಚರಿಸಲು ಸಾಧ್ಯವಾಗುತ್ತಿರುವುದಿಲ್ಲ. ಅದನ್ನು ನಿಯಂತ್ರಿಸಲು ಕೋರಿದರು. ಸದರಿ ಕಾರ್ಖಾನೆಯವರ ಉದ್ದೇಶಿತ ಯೋಜನೆಯನ್ನು ಸ್ಥಾಪಿಸಲು ಅಭ್ಯಂತರವಿರುವುದಿಲ್ಲ.

**6. ಶ್ರೀ ಜಗದೀಶ್, ಕುಕ್ಕವಾಡ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಸದರಿ ಯೋಜನೆಗೆ ಒಪ್ಪಿಗೆಯನ್ನು ಸೂಚಿಸುತ್ತಾ, ಸದರಿ ಕಾರ್ಖಾನೆಯವರು ಕಬ್ಬು ನುರಿಯುವ ಸಾಮರ್ಥ್ಯವನ್ನು 4800 ಟಿಸಿಡಿ ಯಿಂದ 7500 ಟಿಸಿಡಿ ಗೆ ಮತ್ತು ಕೋ-ಜೆನ್ ವಿದ್ಯುತ್ ಉತ್ಪಾದನೆಯನ್ನು 24 ಮೆ.ವ್ಯಾಟ್‌ನಿಂದ 54 ಮೆ.ವ್ಯಾಟ್‌ಗೆ ಹೆಚ್ಚಿಸುವುದಕ್ಕೆ ಅವಕಾಶ ಮಾಡಿಕೊಟ್ಟಿರುತ್ತೇವೆ. ಸದರಿ ಕಾರ್ಖಾನೆಯಿಂದ ಹೊರ ಬೂದಿಯು ಗ್ರಾಮದಲ್ಲಿ ಹರಡುತ್ತಿರುತ್ತದೆ. ಗ್ರಾಮದಲ್ಲಿ ಬೂದಿಯಿಂದ ತೊಂದರೆಯಾಗುತ್ತಿರುತ್ತದೆ. ಇದು ಒಂದು ದಿನದ ಸಮಸ್ಯೆಯಲ್ಲ ಪ್ರತಿ ದಿನದ ಸಮಸ್ಯೆಯಾಗಿರುತ್ತದೆ. ಸದರಿ ಕಾರ್ಖಾನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸದೆ ಹೊರಗೆ ಬಿಡುತ್ತಿರುತ್ತಾರೆ. ಇದರಿಂದ ಕೊಳವೆ ಬಾವಿಗಳಿಗೆ ತ್ಯಾಜ್ಯ ನೀರು ಮಿಶ್ರಣವಾಗುವ ಸಾಧ್ಯತೆಯಿರುತ್ತದೆ. ಸದರಿ ಕಾರ್ಖಾನೆಯಿಂದ ಹೊರ ಬರುವ ವಾಸನೆಯು ಸುಮಾರು 1.5 ಕೀ.ಮೀ. ವರೆಗೆ ಇರುತ್ತದೆ. ಸದರಿ ಕಾರ್ಖಾನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಿ ರೈತರಿಗೆ ನೀಡುವುದು, ಸದರಿ ಕಾರ್ಖಾನೆಯಿಂದ ಹೊರಬರುವ ವಾಸನೆ ಮತ್ತು ಬೂದಿಯನ್ನು ನಿಯಂತ್ರಿಸಲು ಕ್ರಮಕೈಗೊಳ್ಳುವಂತೆ ಕೋರಿದರು. ಉದ್ದೇಶಿತ ಯೋಜನೆಯಲ್ಲಿ ಸ್ಥಳೀಯರಿಗೆ ಉದ್ಯೋಗವನ್ನು ನೀಡಬೇಕು ಮತ್ತು ಆಸ್ತಿ ಕಳಕೊಂಡವರಿಗೆ ಉದ್ಯೋಗವನ್ನು ನೀಡಬೇಕೆಂದು ತಿಳೀಸುತ್ತಾ, ಉದ್ದೇಶಿತ ಯೋಜನೆಗೆ ಒಪ್ಪಿಗೆ ಇರುತ್ತದೆ ಎಂದು ತಿಳಿಸಿದರು.

**7. ಶ್ರೀ ಡಿ. ಮಲ್ಲೇಶಪ್ಪ, ಮಾಜಿ ಪ್ರಧಾನರು, ಕುಕ್ಕವಾಡ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಸದರಿ ಯೋಜನೆಯನ್ನು ಸ್ವಾಗತಿಸುತ್ತಾ, ಸದರಿ ಕಾರ್ಖಾನೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಿ ಹೊರಗಡೆ ಬಿಡದಂತೆ ಕೋರಿದರು, ಸದರಿ ಕಾರ್ಖಾನೆಯಿಂದ ಗ್ರಾಮದಲ್ಲಿ ಧೂಳು ಬರುತ್ತಿರುತ್ತದೆ. ಸದರಿ ಕಾರ್ಖಾನೆಯ ಬೂದಿಯು ಮನೆಯ ಒಳಗಡೆ ಸಹ ಬರುತ್ತಿರುತ್ತದೆ. ಇದರಿಂದ ಗ್ರಾಮದ ಜನರ ಆರೋಗ್ಯಕ್ಕೆ ತೊಂದರೆಯಾಗುತ್ತಿರುತ್ತದೆ. ಹೊಸ ಯೋಜನೆಯಲ್ಲಿ ಜಮೀನುಗಳನ್ನು ಕಳಕೊಂಡವರಿಗೆ ಉದ್ಯೋಗವನ್ನು ಒದಗಿಸುವಂತೆ ಹಾಗೂ ಸ್ಥಳೀಯರಿಗೆ ಉದ್ಯೋಗವನ್ನು ನೀಡುವಂತೆ ಕೋರಿದರು. ಸದರಿ ಯೋಜನೆಯಿಂದ ರೈತರಿಗೆ ಹಾಗೂ ಸ್ಥಳೀಯರಿಗೆ ಅನುಕೂಲವಾಗುವಂತೆ ಕ್ರಮಕೈಗೊಳ್ಳುವಂತೆ ಕೋರಿದರು.

**8. ಶ್ರೀ ಆಂಜನೇಯ ನಾಗೇನಹಳ್ಳಿ, ಸಮಗ್ರ ಪರಿವರ್ತನಾ ಸಮುದಾಯ, ಹಾವೇರಿ.**

ಇವರು ಸದರಿ ಯೋಜನೆಯನ್ನು ಸ್ವಾಗತಿಸುತ್ತಾ, ಸದರಿ ಕಾರ್ಖಾನೆಯವರ ಉದ್ದೇಶಿತ ಯೋಜನೆಯಲ್ಲಿ ಕುಕ್ಕವಾಡ ಗ್ರಾಮದ ಮತ್ತು ಅಕ್ಕಪಕ್ಕದ ಗ್ರಾಮಸ್ಥರಿಗೆ ಉದ್ಯೋಗವನ್ನು ನೀಡುವುದು, ಪರಿಸರ ಮಾಲಿನ್ಯಗೊಳ್ಳದಂತೆ ಕ್ರಮಕೈಗೊಳ್ಳುವುದು, ಬೇವು ಮತ್ತು ಹೊನ್ನೆ ಸಸಿಗಳನ್ನು ನಡೆಸುವುದು, ಪರಿಸರಕ್ಕೆ ತೊಂದರೆಯಾಗದಂತೆ ಉದ್ದೇಶಿತ ಯೋಜನೆಯನ್ನು ಪ್ರಾರಂಭಿಸಲು ಒಪ್ಪಿಗೆ ಇರುತ್ತದೆ ಎಂದು ತಿಳಿಸಿದರು.

**9. ಶ್ರೀ ಲಿಂಗೇಶ, ಕುಕ್ಕವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**

ಇವರು ಸದರಿ ಕಾರ್ಖಾನೆಯವರ ಉದ್ದೇಶಿತ ಡಿಸ್ಟಲರಿ ಸ್ಥಾಪಿಸಲು ಅಭ್ಯಂತರವಿರುವುದಿಲ್ಲ, ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು.

**ಶ್ರೀ ಉಮಾಪತಿ, ವಿಶೇಷ ಹಣಕಾಸು ಅಧಿಕಾರಿಗಳು, ಮೆ॥ದಾವಣಗೆರೆ ಶುಗರ್ಸ್ ಕಂಪನಿ ಲಿಮಿಟೆಡ್** ಇವರು ಪರಿಸರ ಸಾರ್ವಜನಿಕ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಅನಿಸಿಕೆಗಳಿಗನುಗುಣವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

1. ಸಾರ್ವಜನಿಕರ ಅನುಕೂಲಕ್ಕಾಗಿ ಶ್ಯಾಗಲಿ ಹಳ್ಳದ ಚೆಕ್ ಡ್ಯಾಂನಲ್ಲಿ ತುಂಬಿರುವ ಹೂಳನ್ನು ಸ್ವಚ್ಛಗೊಳಿಸಲಾಗುವುದು.
2. ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಮಾಲಿನ್ಯ ನಿಯಂತ್ರಣ ಮಂಡಳಿ ಮಾನಕಗಳಿಗನುಗುಣವಾಗಿ ಸಂಸ್ಕರಿಸಲಾಗುವುದು ಹಾಗೂ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕಾರ್ಖಾನೆಯ ಆವರಣದಲ್ಲಿ ಮತ್ತು ವ್ಯವಸಾಯದ ಜಮೀನುಗಳಲ್ಲಿ ಉಪಯೋಗಿಸಲಾಗುವುದು.
3. ಕಾರ್ಖಾನೆಯಲ್ಲಿ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಸೂಕ್ತ ಮಾಲಿನ್ಯ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲಾಗುವುದು.
4. ಕಾರ್ಖಾನೆಯ ಉದ್ದೇಶಿತ ಯೋಜನೆಯಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಒದಗಿಸಲಾಗುವುದು.
5. ಕಾರ್ಖಾನೆಯ ಸಿ.ಎಸ್.ಆರ್. ಸ್ಕೀಮ್‌ನಲ್ಲಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

**ಶ್ರೀ ಕೆ.ಬಿ. ಕೊಟ್ರೇಶ್, ಪರಿಸರ ಅಧಿಕಾರಿಗಳು,** ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ ಇವರು ಕೆಳಕಂಡ ಸಲಹೆ ಸೂಚನೆಗಳನ್ನು ನೀಡಿದರು.

1. ಸದರಿ ಕಾರ್ಖಾನೆಯಲ್ಲಿ ಬೇವು, ಹೊಂಗೆ ಮತ್ತು ಮಹಾಘನಿ ಸಸಿಗಳ ನರ್ಸರಿ ಮಾಡುವುದು.
2. ಸದರಿ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಿ ಕಾರ್ಖಾನೆಯ ಆವರಣದಲ್ಲಿ ಉಪಯೋಗಿಸಿಕೊಳ್ಳುವುದು [illegible]
3. ತ್ಯಾಜ್ಯ ನೀರು ಗುಂಡಿಗಳಲ್ಲಿ ನಿಲ್ಲುವುದರಿಂದ ವಾಸನೆ ಬರುತ್ತಿರುತ್ತದೆ. ಆದ್ದರಿಂದ ತ್ಯಾಜ್ಯ ನೀರು ಒಂದಡೆ ನಿಲ್ಲದಂತೆ ಕ್ರಮಕೈಗೊಳ್ಳವುದು.
4. ಸದರಿ ಕಾರ್ಖಾನೆಯಿಂದ ಉತ್ಪತ್ತಿಯಾಗುವ ಬೂದಿಯನ್ನು ನಿಯಂತ್ರಿಸಲು ಚಿಮಣಿಗಳಿಗೆ ಅಳವಡಿಸಿರುವ ESP ಸರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು.
5. ಸದರಿ ಕಾರ್ಖಾನೆಯಲ್ಲಿರುವ 3 ಚಿಮಣಿಗಳ Performance Studyನ್ನು ಮಾಡಿಸುವುದು. ಸದರಿ ಚಿಮಣಿಗಳಿಂದ ಬೂದಿಯು ಬರದಂತೆ ಕ್ರಮಕೈಗೊಳ್ಳುವುದು.
6. ಕಾರ್ಖಾನೆಯ ಮುಂಭಾಗದಲ್ಲಿ ಸ್ವಚ್ಛಗೊಳಿಸುವುದು.

ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರಾದ **ಶ್ರೀ ಜಿ.ಎನ್. ಶಿವಮೂರ್ತಿ,** ಭಾ.ಆ.ಸೇ. **ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ** ಇವರು ಸಭೆಯಲ್ಲಿ ಮಾತನಾಡುತ್ತಾ, ಸಾರ್ವಜನಿಕರು ಸದರಿ ಯೋಜನೆಯ ಬಗ್ಗೆ ಅನಿಸಿಕೆಗಳನ್ನು ವ್ಯಕ್ತಪಡಿಸಿರುವ ಪ್ರಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದರು.

1. ಸದರಿ ಕಾರ್ಖಾನೆಯಲ್ಲಿ ಬೇವು, ಹೊಂಗೆ ಮತ್ತು ಮಹಾಘನಿ ಸಸಿಗಳ ನರ್ಸರಿ ಮಾಡಿ ರೈತರಿಗೆ ನೀಡುವುದು.
2. ಕಾರ್ಖಾನೆಯಲ್ಲಿ ಮಾಲಿನ್ಯವನ್ನು ನಿಯಂತ್ರಿಸಲು ಆಧುನಿಕ ಉಪಕರಣಗಳನ್ನು ಅಳವಡಿಸಿಕೊಳ್ಳುವುದು.
3. ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ನೇರವಾಗಿ ಶ್ಯಾಗಲಿ ಹಳ್ಳ ಸೇರದಂತೆ ಕ್ರಮಕೈಗೊಳ್ಳುವುದು.
4. ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕಾರ್ಖಾನೆಯ ಆವರಣದಲ್ಲಿ ಉಪಯೋಗಿಸುವುದು ಹಾಗೂ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಸುತ್ತಮುತ್ತಲಿನ ರೈತರು ಕೋರಿದ್ದಲ್ಲಿ ಕೃಷಿ ಜಮೀನುಗಳಿಗೆ ಒದಗಿಸುವುದು.
5. ರಸ್ತೆಗಳ ಅಭಿವೃದ್ಧಿಗೆ ಆಧ್ಯತೆ ಕೊಡುವುದು.
6. ಸದರಿ ಕಾರ್ಖಾನೆಯಲ್ಲಿ ಸ್ಥಳೀಯವರಿಗೆ ಉದ್ಯೋಗಾವಕಾಶವನ್ನು ಒದಗಿಸುವುದು.

ಮುಂದುವರೆದು, ಸಭೆಯ ನಡಾವಳಿಯೊಂದಿಗೆ ವಿಡಿಯೋ ಸಿಡಿ, ಛಾಯಾ ಚಿತ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರ ಮುಖಾಂತರ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಗುಣ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸುವುದಾಗಿ ತಿಳಿಸಿದರು.

ಸಭೆಗೆ ಆಗಮಿಸಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿ.ಎನ್. ಶಿವಮೂರ್ತಿ,ಭಾ.ಆ.ಸೇ.
ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಪರಿಸರ ಸಾರ್ವಜನಿಕ ಸಭೆ, ಕುಕ್ಕವಾಡ ಗ್ರಾಮ,
ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.